ದಿನಾಂಕ 26.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಶ್ರೀ.ಕೆ.ಜಿ.ಎ. ವಕೀಲರಿಂದಃ-**

ನಾನು ಮೂಲತಃ ಹಾತೂರು ನಿವಾಸಿ. ನಾನು ಶಿಕ್ಷಕನಾಗಿ ನಿವೃತಿ ಹೊಂದಿರುತ್ತೇನೆ. ನನ್ನ ತಂದೆ ಮೂಲತಃ ಹಾತೂರು ನಿವಾಸಿ. ನನ್ನ ತಂದೆಗೆ ಸಣ್ಣಪ್ಪ ಮತ್ತು ಪುಟ್ಟಪ್ಪ ಎಂಬ ಇಬ್ಬರು ತಮ್ಮಂದಿರು ಇದ್ದರು. ನನ್ನ ತಂದೆಗೆ ಹಾತೂರು ಮತ್ತು ಕೆ. ಬೈಗೋಡು ಗ್ರಾಮದಲ್ಲಿ ಆಸ್ತಿಗಳು ಇದ್ದವು. ಸದರಿ ಆಸ್ತಿಗಳು ಅವರ ಪಿತ್ರಾರ್ಜಿತ ಸ್ವತ್ತುಗಳು. ನನ್ನ ತಂದೆಗೆ ಚಿಕ್ಕಮ್ಮ ಮತ್ತು ರಾಜಮ್ಮ ಎಂಬ ಇಬ್ಬರು ಪತ್ನಿಯರು. ಚಿಕ್ಕಮ್ಮನಿಗೆ ಕಾಳಪ್ಪ ಎಂಬ ಒಬ್ಬನೇ ಮಗನಿದ್ದು, ರಾಜಮ್ಮನಿಗೆ ನಾಗಯ್ಯ, ಗೋಪಾಲಕೃಷ್ಣ, ಚಂದ್ರಶೇಖರ್ ಮತ್ತು ಅಶೋಕ್ ಕುಮಾರ ಎಂಬ 4 ಜನ ಮಕ್ಕಳು. ಅಶೋಕ್ ಕುಮಾರ್ ನನ್ನ ತಮ್ಮನಾಗಿದ್ದು, ಆತ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಕೆಲಸ ನಿರ್ವಹಿಸಿದ್ದರು. ಚಂದ್ರಶೇಖರ್ ಉಪನ್ಯಾಸಕರಾಗಿದ್ದರು. ನಾಗಯ್ಯರವರು ವಯಸ್ಕ ಶಿಕ್ಷಣಾ ಇಲಾಖೆಯ ನೌಕರರಾಗಿದ್ದರು. 1980 ಕ್ಕಿಂತ ಮೊದಲು ನಾಗಯ್ಯರವರು ಸ್ವತಃ ಕೆಲಸ ಬಿಟ್ಟು ಬಂದಿರುತ್ತಾರೆ. ನಾನು, ಚಂದ್ರಶೇಖರ್ ಮತ್ತು ಅಶೋಕ್ ಕುಮಾರ್ ರವರು ಸೇವಾ ನಿವೃತ್ತಿಯನ್ನು ಹೊಂದಿ ಪಿಂಚಣಿ ಸೌಲಭ್ಯ ಪಡೆಯುತ್ತಿದ್ದೇವೆ ಎಂದರೆ ಸರಿ.

ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿ, ಅದರಲ್ಲಿರುವ ಮನೆಯು ತನ್ನ ಮಗನ ಮನೆ ಎಂದು ನೋಡಿ ಗುರುತಿಸಿದ್ದರಿಂದ, ಸದರಿ ಭಾವಚಿತ್ರವನ್ನು ನಿಶಾನೆ ಪಿ.3 ಎಂದು ಗುರುತಿಸಲಾಯಿತು. ಸದರಿ ಮನೆಯು ಕೆ. ಬೈಗೋಡು ಗ್ರಾಮದಲ್ಲಿ ಇದೆ. ಯಾವ ಸರ್ವೆ ನಂಬರ್ ನಲ್ಲಿ ಮನೆ ಇದೆ ಎಂಬುದು ನನಗೀಗ ನೆನಪಿಲ್ಲ. ನಿಶಾನೆ ಪಿ. 3 ರಲ್ಲಿರುವ ಮನೆಯ ಆಸ್ತಿ ನನ್ನ ಹಿಸ್ಸೆಗೆ ವಿಭಾಗದಲ್ಲಿ ಬಂದಿರುತ್ತದೆ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ನನ್ನ ಸಹೋದರರ ಪರವಾಗಿಯೂ ಸಹ ಸಲ್ಲಿಸಿರುತ್ತೇನೆ.

ನಾನು ನನ್ನ ಹಿಸ್ಸೆಗೆ ಬಂದ ಸ್ವತ್ತುಗಳನ್ನು ನನ್ನ ಮಕ್ಕಳಾದ ಅನಿಲ್ ಕುಮಾರ ಮತ್ತು ಆದರ್ಶ್ ರವರಿಗೆ ನೋಂದಾಯಿತ ವಿಭಾಗ ಪತ್ರದ ಮೂಲಕ ವಿಭಾಗ ಮಾಡಿಕೊಟ್ಟಿರುತ್ತೇನೆ. ಸದರಿ ವಿಭಾಗಪತ್ರದಲ್ಲಿ ಸರ್ವೆ ನಂ. 9, 64/2, 65/2, 65/3, 109/1 ಮತ್ತು 121/2 ರ ಸ್ವತ್ತುಗಳನ್ನು ವಿಭಾಗಮಾಡಲಾಗಿದೆ ಎಂದರೆ ಸರಿ. ಸದರಿ ಸ್ವತ್ತುಗಳು ಪಹಣಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಶಾನೆ ಪಿ. 4 ರಿಂದ 9 ಎಂದು ಗುರುತಿಸಲಾಯಿತು. ನನ್ನ ಒಬ್ಬ ಮಗ ಅಮೇರಿಕಾದಲ್ಲಿ

ನೆಲೆಸಿದ್ದು, ಮತ್ತೊಬ್ಬ ಮಗ ಹಾತೂರಿನಲ್ಲಿ ಪ್ರತ್ಯೇಕವಾಗಿ ವಾಸವಾಗಿದ್ದಾನೆ.

ವಿಭಾಗದಲ್ಲಿ ನನ್ನ ತಮ್ಮನಾದ ಅಶೋಕ್ ಕುಮಾರ್ ನ ಹಿಸ್ಸೆಗೆ ಸರ್ವೆ ನಂ. 7/8, 64/3 ಮತ್ತು 107/2 ಹಾಗೂ ಚಂದ್ರಶೇಖರ್ ರವರ ಹಿಸ್ಸೆಗೆ ಸರ್ವೆ ನಂ. 110/4, 110/6, 110/7, 112/3 ಮತ್ತು 120/1 ರ ಸ್ವತ್ತುಗಳು ಹೋಗಿರುತ್ತವೆ. ಸದರಿ ಸ್ವತ್ತುಗಳ ಪಹಣಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ನಿಶಾನೆ ಪಿ. 10 ರಿಂದ 17 ಎಂದು ಗುರುತಿಸಲಾಯಿತು. ದಿಃ 12.06.1984 ರ ವಿಭಾಗಪತ್ರದ ಆಧಾರದ ಮೇರೆಗೆ ನಿಶಾನೆ ಪಿ. 10 ರಿಂದ 17 ರ ದಾಖಲೆಗಳು ಅವರುಗಳ ಹೆಸರಿಗೆ ಬದಲಾವಣೆಯಾಗಿರುತ್ತವೆ. ನಿಶಾನೆ ಪಿ. 4 ರಿಂದ 9 ರಲ್ಲಿ ನಮೂದಿಸಿರುವ ಸ್ವತ್ತುಗಳು ಪಹಣಿಗಳು ನನ್ನ ಹೆಸರಿಗೂ ಸಹ ದಿಃ 12.06.1984 ರ ವಿಭಾಗಪತ್ರದ ಮೂಲಕ ಬದಲಾವಣೆಯಾಗಿರುತ್ತವೆ. ಸದರಿ ವಿಭಾಗಪತ್ರವನ್ನು ನೋಂದಣಿ ಮಾಡಿಸಿರುವುದಿಲ್ಲ.

ದಿಃ 21.05.1988 ರಲ್ಲಿ ನಾನು ಮತ್ತು ನನ್ನ ಸಹೋದರರು ನೋಂದಾಯಿತ ವಿಭಾಗಪತ್ರವನ್ನು ಮಾಡಿಕೊಂಡಿರುತ್ತೇವೆ. ದಿಃ 21.05.1988 ರಲ್ಲಿ ಆದಂತಹ ನೋಂದಾಯಿತ ವಿಭಾಗಪತ್ರದ ಮೂಲಕ ಆಸ್ತಿಗಳ

ಪಹಣಿಗಳು ನಮ್ಮ ಹೆಸರಿಗೆ ಬದಲಾವಣೆಯಾಗಿರುವುದಿಲ್ಲ. 1988 ರಲ್ಲಿ ನನಗೆ 43 ವರ್ಷ ವಯಸ್ಸಾಗಿತ್ತು. ನೋಂದಾಯಿತ ವಿಭಾಗಪತ್ರವನ್ನು ಎಲ್ಲಾ ಪಕ್ಷಗಾರರ ಒಪ್ಪಿಗೆಯ ಮೇರೆಗೆ ಮಾಡಲಾಗಿರುತ್ತದೆ. 1984 ರ ಮಹಜರ್ ನಲ್ಲಿ ಆಸ್ತಿಗಳನ್ನು ನಾಗಯ್ಯ ಮತ್ತು ಅಶೋಕ್ ಕುಮಾರ್ ರವರಿಗೆ ಜಂಟಿಯಾಗಿ ನೀಡಲಾಗಿತ್ತು ಎಂದರೆ ಸರಿ. ಜಂಟಿಯಾಗಿ ಹಂಚಿಕೆಯಾಗಿದ್ದ ಆಸ್ತಿಗಳನ್ನು ಪ್ರತ್ಯೇಕವಾಗಿ ಹಂಚಿಕೆ ಮಾಡುವ ಉದ್ದೇಶದಿಂದ ನೋಂದಾಯಿತ ವಿಭಾಗಪತ್ರವನ್ನು ಮಾಡಿಕೊಳ್ಳಲಾಗಿರುತ್ತದೆ.

ನೋಂದಾಯಿತ ವಿಭಾಗ ಪತ್ರದ ಮೂಲ ಪತ್ರ ನನ್ನ ಬಳಿ ಇದೆ. ನೋಂದಾಯಿತ ವಿಭಾಗಪತ್ರವನ್ನು ನನ್ನ ಅಣ್ಣ ನಾಗಯ್ಯ ತಯಾರಿಸಿದ್ದರು. ಆ ಸಂದರ್ಭದಲ್ಲಿ ನಾನು ನನ್ನ ಅಣ್ಣನ ಜೊತೆ ಹೋಗಿರಲಿಲ್ಲ. ನೋಂದಣಿ ಸಮಯದಲ್ಲಿ ನಾನು ಹಾಜರಿದ್ದೆನು. ನಾವು ನಿಶಾನೆ ಪಿ. 2 ದಾಖಲೆಯನ್ನು ಓದದೇ ಸಹಿ ಮಾಡಿರುತ್ತೇವೆ. ನಮ್ಮಗಳ ಹಿಸ್ಸೆಗೆ ಯಾವ ಸ್ವತ್ತುಗಳನ್ನು ಹಂಚಿಕೆ ಮಾಡಲಾಗಿದೆ ಎಂಬುದು ನೋಂದಾಣಿಯಾದ ಬಳಿಕ ನಾವು ನೋಡಿರುತ್ತೇವೆ. ವಿಭಾಗಪತ್ರದ ಒಂದು ಪ್ರತಿಯಲ್ಲಿ ಮಾತ್ರ ತಯಾರಿಸಲಾಗಿರುತ್ತದೆ. ನೋಂದಾಣಿಯಾದ ಎಷ್ಟು

ದಿನದ ಬಳಿಕ ವಿಭಾಗಪತ್ರದ ಪ್ರತಿಯನ್ನು ನಾನು ಪಡೆದುಕೊಂಡಿರುತ್ತೇನೆ ಎಂಬುದು ನನಗೀಗ ನೆನಪಿಲ್ಲ. ವಿಭಾಗಪತ್ರದ ಪ್ರತಿಯನ್ನು ಪಡೆದ ಕೂಡಲೇ ನಾನು ಅದರ ಒಕ್ಕಣೆಗಳನ್ನು ಓದಿರುತ್ತೇನೆ. ಆಗ ಸರ್ವೆ ನಂ. 7/2 ನಾಗಯ್ಯರವರ ಹಿಸ್ಸೆಗೆ ಹೋಗಿರುವುದು ಗೊತ್ತಾಗಿರುತ್ತದೆ. ಬಳಿಕ ಅದರ ವಿರುದ್ಧ ನಾವು ಇಲ್ಲಿಯವರೆಗೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ.

1984 ಇಸವಿಯ ಮಹಜರ್ ನಲ್ಲಿ ಸರ್ವೆ ನಂ. 7/2 ನಾಗಯ್ಯ ಮತ್ತು ಅಶೋಕ್ ಕುಮಾರ್ ರವರ ಹಿಸ್ಸೆಗೆ ಜಂಟಿಯಾಗಿ ಹಂಚಿಕೆ ಮಾಡಲಾಗಿತ್ತು. ಸರ್ವೆ ನಂ. 7/2 ರಲ್ಲಿ ಒಟ್ಟು 50 ಸೆಂಟ್ಸ್ ಜಮೀನು ಇದೆ. ಪ್ರಸ್ತುತ ಚಂದ್ರಶೇಖರ್ ರವರು ಮೈಸೂರಿನಲ್ಲಿ ನೆಲೆಸಿದ್ದಾರೆ. ನಾಗಯ್ಯರವರು ನೋಂದಾಯಿತ ವಿಭಾಗಪತ್ರದ ಮೂಲಕ ತಮ್ಮ ಹಿಸ್ಸೆಗೆ ಬಂದ ಸ್ವತ್ತುಗಳ ಖಾತೆಯನ್ನು ವರ್ಗಾಯಿಸಿಕೊಂಡಿರುತ್ತಾರೆ. ನಾವುಗಳು ಸಹ ನಮ್ಮ ಹಿಸ್ಸೆಗೆ ಬಂದ ಸ್ವತ್ತುಗಳ ಪಹಣಿಗಳನ್ನು 1988 ರ ನಂತರ ನಮ್ಮ ಹೆಸರಿಗೆ ಮಾಡಿಸಿಕೊಂಡಿರುತ್ತೇವೆ.

ನಿಶಾನೆ ಪಿ. 2 ರ ಒಕ್ಕಣೆಗಳನ್ನು ಒಪ್ಪಿಕೊಂಡು ನಾನು ಸಹಿ ಮಾಡಿರುತ್ತೇನೆ. ವಿಭಾಗಪತ್ರದ ಮೂಲಕ ನಮ್ಮಗಳ ಹಿಸ್ಸೆಗೆ ಬಂದ ಸ್ವತ್ತುಗಳ ಕಂದಾಯ ದಾಖಲೆಗಳನ್ನು ನಮ್ಮಗಳ ಹೆಸರಿಗೆ ಬದಲಾವಣೆ

ಮಾಡಿಕೊಂಡು ಸ್ವಾಧೀನಾನುಭವದಲ್ಲಿ ಇದ್ದೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸರ್ವೆ ನಂ. 7/2 ರ ಸ್ವತ್ತಿನಲ್ಲಿ ನಾಲ್ಕು ಜನರು ಸ್ವಾಧೀನದಲ್ಲಿ ಇದ್ದೇವೆ ಎಂದು ಉತ್ತರಿಸಿರುತ್ತಾರೆ. ನಿಶಾನೆ ಪಿ. 2 ಪ್ರಕಾರ ಸರ್ವೆ ನಂ. 7/2 ನಾಗಯ್ಯರವರ ಹಿಸ್ಸೆಗೆ ಹಂಚಿಕೆ ಮಾಡಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ಅವಗಾಹನೆಗೆ ಬರದೇ ಜಂಟಿಯಾಗಿ ನಾಲ್ಕು ಜನರ ಹೆಸರನ್ನು ನಮೂದಿಸುವ ಬದಲು ಒಬ್ಬರೇ ಹೆಸರನ್ನು ನಮೂದಿಸಲಾಗಿದೆ ಎಂದು ಉತ್ತರಿಸಿರುತ್ತಾರೆ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.